ದಿನ ಗೊತ್ತಿಲ್ಲದವರಿಗೆ ಗ್ರೆಗೊರಿಯನ್ ಕ್ಯಾಲೆಂಡರ್‌ನ ಮೊದಲ ದಿನವೇ ಹುಟ್ಟಿದ ದಿನ. ಇಲೆಕ್ಷನ್ ಕಾರ್ಡಲ್ಲಿ ನಮೂದಾಗಿದ್ದ ಇಸವಿ ಓದಿ ವಯಸ್ಸು ನಲ್ವತ್ತೊಂದು ಎಂದು ಬರೆದುಕೊಂಡರು.

ಇಲೆಕ್ಷನ್ ಕಾರ್ಡಲ್ಲಿ ಗಂಡನ ಹೆಸರಿನ ಜಾಗ ಖಾಲಿ ಇತ್ತು. ಗಂಡನ ಹೆಸರು ಕೇಳಿದರು. ಸಾವಿತ್ರಿ ಮಾತನಾಡಲಿಲ್ಲ. ಕೆಲವರು ಗಂಡನ ಹೆಸರು ಹೇಳುವುದಿಲ್ಲವೆಂದು ಮತ್ತೊಮ್ಮೆ ಕೇಳಿದರು. 'ನೋಡಿ, ಫಾರಂ ಭರ್ತಿ ಮಾಡಲು ಗಂಡನ ಹೆಸರು ಬೇಕು. ಹೇಳಿ'

'ನಾನು ಲೇಸಿ' ಎಂದ ಆಕೆ ಗೋಡೆ ಮೇಲಿನ ಗಡಿಯಾರದ ಮುಳ್ಳುಗಳನ್ನು ನೋಡುತ್ತಾ ನಿಂತಳು.

ಕೃಷ್ಣಪ್ಪ ತಲೆ ಕೆಟ್ಟು ಆಕೆಯ ಪಕ್ಕ ನಿಂತಿದ್ದ ಹುಡುಗಿಯನ್ನು ತೋರಿಸಿ, 'ನಿಮ್ಮ ಮಗಳಾ' ಕೇಳಿದರು. ಆಕೆ ಹು ಎಂದಳು.

ಸಣ್ಣಗಿನ ಶರೀರದ, ಬಿಳುಪು ಮೈನ, ಚುರುಕು ಕಣ್ಣುಗಳ ಹುಡುಗಿ. ದೇಹದಲ್ಲಿ ಬೆಳವಣಿಗೆ ಇಲ್ಲದಿದ್ದರೂ ವಯಸ್ಸು ಸುಮಾರು 12-13 ಎನ್ನುವಂತಿತ್ತು. ಕೃಷ್ಣಪ್ಪ, 'ತಂದೆ ಹೆಸರೇನಮ್ಮಾ?' ಕೇಳಿದರು.

ಹುಡುಗಿ ಉತ್ತರ ಕೊಡದೆ ಸುಮ್ಮನಿತ್ತು. ಮತ್ತೊಮ್ಮೆ ಕೇಳಿದರು. ಹುಡುಗಿ ಕೊಠಡಿಯ ಬಾಗಿಲು ತೆರೆದು ಓಡಿ ಹೋಯಿತು. ಕೃಷ್ಣಪ್ಪಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಅಟೆಂಡರ್ ರಾಜು ಚೇಂಬರಿನಾಚೆ ನಿಂತು ಗಮನಿಸುತ್ತಿದ್ದ. ಸಾವಿತ್ರಿ ತಲೆ ತಗ್ಗಿಸಿ ನಿಂತಿದ್ದು, ಮಗಳು ಓಡಿ ಹೋಗಿದ್ದು ನೋಡಿ ಅವನಿಗೆ ಅರ್ಥವಾಗಿರಬೇಕು. ಅವನು ಅದೇ ಊರಿನವನು. ಚೇಂಬರಿಗೆ ಬಂದ. ಅವನು ಬಂದಿದ್ದು ಅನುಕೂಲವಾಯಿತು.

'ರಾಜು, ಗಂಡನ ಹೆಸರು ಹೇಳುತ್ತಾ ಇಲ್ಲ. ಕೇಳಿ' ಎಂದರು. ರಾಜು ಅದನ್ನು ನಿರೀಕ್ಷಿಸುತ್ತಿದ್ದವನಂತೆ, ಮ್ಯಾನೇಜರರ ಕಿವಿಯ ಹತ್ತಿರ ಮುಖ ತಂದು ಏನೋ ಹೇಳಿದ. ಅವನು ಹೇಳಿದ್ದು ಕೇಳಿ ಕೃಷ್ಣಪ್ಪಗೆ ಆಶ್ಚರ್ಯವಾಯಿತು. ಆವರೆಗೆ ಕೃಷ್ಣಪ್ಪ ಸಾವಿತ್ರಿಯನ್ನು ಸರಿಯಾಗಿ ಗಮನಿಸಿರಲಿಲ್ಲ. ರಾಜು ಹೇಳಿದ್ದು ಸಾವಿತ್ರಿಗೆ ಅರ್ಥವಾಯಿತೆಂದು ತೋರುತ್ತದೆ; ತಲೆ ತಗ್ಗಿಸಿ ನಿಂತಿದ್ದಳು.

ಫಾರ್ಮನ್ನು ಭರ್ತಿ ಮಾಡುತ್ತಾ ಓರೆ ಕಣ್ಣಲ್ಲಿ ಸಾವಿತ್ರಿಯನ್ನು ಗಮನಿಸಿದರು. ಕಪ್ಪನೆಯ ದಪ್ಪ ಹೆರಳು, ಚಿಕ್ಕ ಹಣೆ, ಅಗಲ ಕಣ್ಣುಗಳು, ಮಾಸಲು ಬಣ್ಣ, ಸಾಧಾರಣ ಎತ್ತರ ಅವಳನ್ನು ಚಂದದ ಹುಡುಗಿಯರ ಸಾಲಿನಲ್ಲಿ ಸೇರಿಸಿತ್ತು. ತಿಂದು ಉಂಡು ಸುಖವಾಗಿರುವವರು ಏನೇನೋ ಕಸರತ್ತು ಮಾಡಿ ಆಕಾರ ಉಳಿಸಿಕೊಳ್ಳಲು ಹೆಣಗುತ್ತಿರುವಾಗ ಬಡ ಹೆಣ್ಣು ಮಗಳೊಬ್ಬಳ ಸಮ ಪ್ರಮಾಣದ ತುಂಬು ಶರೀರ ಕಣ್ಸೆಳೆಯುವಂತಿತ್ತು. ಹೆಬ್ಬೆಟ್ಟು ಒತ್ತುವಾಗ ಕಣ್ಣುಗಳು ಸೆರಗಿನ ಎಡೆಗೆ ಹರಿದವು. ಬಿಗಿಯಾಗಿ ಕಟ್ಟಿದ ರವಿಕೆಯನ್ನು ಹರಿದು ಹೊರಬರಲು ತವಕಿಸುವಂತಿರುವ ಮೊಲೆ ಕಣ್ಣು ಕುಕ್ಕಿತು. ಪೋಲಿ ಮನಸ್ಸಿಗೆ ನಾಚಿಕೊಂಡು ಮುಖ ಬಿಗಿದುಕೊಂಡರು. ಹಣ ಕಟ್ಟಿ ಎಂದು ಕ್ಯಾಷ್ ಕೌಂಟರ್‌ನತ್ತ ಕೈ ತೋರಿದರು.

ರಾಜು ಜವಾರಿ ಭಾಷೆಯಲ್ಲಿ ಅವಳ ಬಗ್ಗೆ ಹೇಳಿದ್ದ. ಲೇಸಿ ಎಂದರೆ ವೇಶ್ಯೆ ಎಂದು ಕೃಷ್ಣಪ್ಪ ಯಾವ ಡಿಕ್ಷನರಿಯಲ್ಲೂ ಓದಿರಲಿಲ್ಲ. ರಾಜುವನ್ನು ಕರೆದು ಕೇಳುವುದು ಅನವಶ್ಯಕ ಕುತೂಹಲಕ್ಕೆ ಕಾರಣವಾಗಬಹುದೆಂದು ಅವನು ಒಳ ಬರುವವರೆಗೆ ಕಾದರು. ಕಡತದೊಂದಿಗೆ ಬಂದೊಡನೆ ಲೇಸಿ ಎಂದು ಯಾಕೆ ಕರೆಯುತ್ತಾರೆ ಎಂದು ವಿಚಾರಿಸಿದರು. ರಾಜು ಮ್ಯಾನೇಜರ್‌ಗೆ ಪಾಠ ಮಾಡಲು ಉತ್ಸುಕನಾಗಿದ್ದ. ನಮ್ಮ ಊರಲ್ಲಿ ಸುಮಾರು ಜನ ಲೇಸಿಗಳು ಇದ್ದಾರೆ ಎಂದು ಶುರು ಮಾಡಿ, ಆ ಪದ್ಧತಿಯ ಬಗ್ಗೆ ವಿವರಿಸತೊಡಗಿದ...

ಹೋಳಿ ಹುಣ್ಣಿಮೆಗೆ ಹೆಣ್ಣು ಮಕ್ಕಳು, ಗಂಡು ಮಕ್ಕಳು ಕಾಮನಾಟ ಆಡುತ್ತಿದ್ದರು. ಲಂಗು ಲಗಾಮಿಲ್ಲದ ಪೋಲಿ ಮಾತುಗಳು; ಮೈ ಮುಟ್ಟುವುದು, ಉಜ್ಜುವುದು ನಡೆಯುತ್ತಿತ್ತು. ರಂಗಿನಾಟ, ಹಾಡು, ಕುಣಿತಗಳು ಮುಗಿದು, ಹೆಣ್ಣು ಮಕ್ಕಳನ್ನು ಬಣ್ಣದ ನೀರು ತುಂಬಿದ ಹೊಂಡಕ್ಕೆ ತಳ್ಳುತ್ತಿದ್ದರು. ಒಪ್ಪದವರನ್ನು ಬಲವಂತವಾಗಿ ದೂಡುತ್ತಿದ್ದರು. ನೀರಲ್ಲಿ ಮುಳುಗೇಳುವ ಹೆಣ್ಣು ಮಕ್ಕಳ ಅರೆಬೆತ್ತಲೆ ದೇಹವನ್ನು ನೋಡಿ, ಅವರಲ್ಲಿ ಇಷ್ಟ ಪಟ್ಟವಳನ್ನು ಮೇಲಕ್ಕೆತ್ತಬಹುದು; ಮೇಲಕ್ಕೆತ್ತಿದವರ ಜೊತೆಯಲ್ಲಿ ಹೆಣ್ಣು ಮಗಳು ಇರಬೇಕು. ಆ ಹೆಣ್ಣಿಗೆ ಲೇಸಿ ಎನ್ನುತ್ತಿದ್ದರು.

ಲೇಸಿಯಾದವರು ಬೇರೆ ಗಂಡಸರ ಸಹವಾಸ ಮಾಡುತ್ತಿರಲಿಲ್ಲ. ಹೆಂಡತಿ ಇದ್ದ ಸಾಹುಕಾರರು, ಜಮೀನ್ದಾರರು, ಹಣವುಳ್ಳವರು ಲೇಸಿಗಳನ್ನು

